**ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಚಿಂಚೋಳಿ**

**ಸಿ.ಸಿ ಸಂಖ್ಯೆ.*ನಂ.1685/2024***

**ಫಿರ್ಯಾಧಿದಾರ:** ಸರಕಾರದ ಪರವಾಗಿ ಚಿಂಚೋಳಿ ಪೋಲಿಸ ಠಾಣೆ

// ವಿರುದ್ದ //

**ಆರೋಪಿ** : ವೆಂಕಟರೆಡ್ಡಿ ಮತ್ತು ಇತರರು

ಆ ರೋ ಪ ಣೆ

ನಾನು **ಶ್ರೀ ದತ್ತುಕುಮಾರ ಜವಳಕರ. B.B.A. L.L.B (Hons) L.L.M.** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ**,** ಈ ಕೆಳಕೆಂಡ ಆರೋಪಿತರು**.**

| | |
|---|---|
| 1 | ವೆಂಕಟರೆಡ್ಡಿ ತಂದೆ ವೀರರೆಡ್ಡಿ ಪುರಶಾಣೆ,<br>60 ವರ್ಷ, ಉಃ ಒಕ್ಕಲುತನ, ವಾಸಃ ಕೊಳ್ಳುರು,<br>ತಾಃ ಚಿಂಚೋಳಿ. |
| 2 | ವಿಘ್ನೆಶ್ವರ ರೆಡ್ಡಿ ತಂದೆ ವೆಂಕಟರೆಡ್ಡಿ ಪುರಶಾಣೆ,<br>37 ವರ್ಷ, ಉಃ ಖಾಸಗಿ ಕೆಲಸ, ವಾಸಃ ಕೊಳ್ಳುರು,<br>ತಾಃ ಚಿಂಚೋಳಿ. |
| 3 | ವಿನೋದ ತಂದೆ ವೆಂಕಟರೆಡ್ಡಿ ಪುರಶಾಣೆ,<br>34 ವರ್ಷ, ಉಃ ಖಾಸಗಿ ಕೆಲಸ, ವಾಸ ಕೊಳ್ಳರು. |

**ಆದ ನಿಮ್ಮ ವಿರುದ್ದ ದೋಷಿಸುವ ಆರೋಪಣೆ ಎನೆಂದರೆ,**

ದಿನಾಂಕಃ 03-06-2024 ರಂದು 12-30 ಪಿ.ಎಮ್ ಗಂಟೆಯ ಸುಮಾರಿಗೆ ಚಿಂಚೋಳಿ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಕೊಳ್ಳರು ಗ್ರಾಮದ ಬಸ್ ನಿಲ್ದಾಣದ ಹತ್ತಿರ ರೋಡಿನ ಮೇಲೆ ಚಾಸಾ-1 ವಿಷ್ಣುಕಾಂತ ನೇದ್ದವರು ಬೀದರಕ್ಕೆ ತೊಟ್ಟಿಲು ಕಾರ್ಯಕ್ರಮಕ್ಕೆಂದು ಹೋಗಿ ಬರಬೇಕೆಂದು ಹೋಗುತ್ತಿದ್ದಾಗ ವೆಂಕಟರೆಡ್ಡಿ 1ನೇ ಮತ್ತು ವಿಘ್ನೇಶ್ವರ 2ನೇ ಆರೋಪಿ ನೀವು ತಡೆದು ನಿಲ್ಲಿಸಿದ ಕಾರಣ, ಈ ಮೂಲಕ ಭಾ.ದಂ.ಸಂ.ಕಲಂ.341 ಸಹವಾಚಕ

ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು.

2. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ವಿಘ್ನೇಶ್ವರ 2ನೇ ಆರೋಪಿ ಚಾಸಾ-1 ವಿಷ್ಣುಕಾಂತ ನೇದ್ದವನಿಗೆ ರಂಡಿ ಮಗನೇ ನೀನು ನಮಗೆ ಹೊಲ ಹೊಡಿಯಲಕ್ಕೆ ಬಿಟ್ಟಿಲ್ಲ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಈ ಮೂಲಕ ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

3. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ವಿಘ್ನೇಶ್ವರ 2ನೇ ಆರೋಪಿ ಚಾಸಾ-1 ವಿಷ್ಣುಕಾಂತ ನೇದ್ದವರಿಗೆ ಕೈಯಿಂದ ಕಪಾಳಕ್ಕೆ ಹೊಡೆದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ. 323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

4. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ವೆಂಕಟರೆಡ್ಡಿ 1ನೇ ಆರೋಪಿ ಚಾಸಾ-1 ವಿಷ್ಣುಕಾಂತ ನೇದ್ದವರಿಗೆ ಕಟ್ಟಿಗೆಯಿಂದ ಎಡಗಾಲಿನ ಹಿಂಬಡಿ ಮೇಲೆ ಹೊಡೆದು ಗುಪ್ತಗಾಯವನ್ನುಂಟು ಮಾಡಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ. 324 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

5. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ವಿಘ್ನೇಶ್ವರ 2ನೇ ಆರೋಪಿ ಚಾಸಾ-1 ವಿಷ್ಣುಕಾಂತ ನೇದ್ದವರಿಗೆ ನೀನು ಹೊಲದ ಕಡೆ

ಕಾಲಿಟ್ಟರೆ ನಿನಗೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವ ಬೆದರಿಕೆ ಹಾಕಿದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ. 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಪ್ರಶ್ನೆ-1: ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?
ಉತ್ತರಃ ಅರ್ಥವಾಯಿತು

ಪ್ರಶ್ನೆ-2: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸವಿರೊ?
ಉತ್ತರಃ ವಿಚಾರಣೆಯಾಗಬೇಕು

ದಿನಾಂಕಃ 08.04.2025.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.